ಕರ್ನಾಟಕ ವಿಧಾನ ಸಭೆ

ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ

ಸನ್ಮಾನ್ಯ ರಾಜ್ಯಪಾಲರಾದ ಖುರ್ಷಿದ್ ಆಲಂ ಖಾನ್‌ರವರು ಕರ್ನಾಟಕ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸಂಯುಕ್ತಾಧಿವೇಶನವನ್ನುದ್ದೇಶಿಸಿ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11–00 ಗಂಟೆಗೆ ಮಾಡಿದ ಭಾಷಣ.

ಬುಧವಾರ 28ನೇ ಡಿಸೆಂಬರ್ 1994, 7 ಪುಷ್ಯ, ಸಾಯನಸೌರ ಶಕ 1917

ರಾಜ್ಯಪಾಲರು ಬೆಳಿಗ್ಗೆ 11–00 ಗಂಟೆಗೆ ವಿಧಾನಸೌಧದ ಮುಖ್ಯದ್ವಾರದ ಬಳಿ ಇರುವ ದ್ವಾರ ಮಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಅಧ್ಯಕ್ಷರು, ಮಾನ್ಯ ಸಭಾಪತಿಯವರು ಮತ್ತು ವಿಧಾನ ಮಂಡಲದ ಕಾರ್ಯದರ್ಶಿಯವರು ಸ್ವಾಗತಿಸಿದರು. ನಂತರ ಪೂರ್ವಭಾಗದಲ್ಲಿರುವ ಲಿಫ್ಟ್‌ಗೆ ರಾಜ್ಯಪಾಲರನ್ನು ಕರೆದೊಯ್ಯಲಾಯಿತು. ಮೊದಲನೆಯ ಮಹಡಿಯಲ್ಲಿ ಲಿಫ್ಟ್‌ನಿಂದ ಹೊರಬಂದ ಬಳಿಕ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಕಾರ್ಯದರ್ಶಿಯವರು

ಮಾನ್ಯ ಅಧ್ಯಕ್ಷರು ಮಾನ್ಯ ಸಭಾಪತಿಯವರು

ರಾಜ್ಯಪಾಲರು

ಎ.ಡಿ.ಸಿ.

ಈ ರೀತಿಯ ಮೆರವಣಿಗೆಯು ವಿಧಾನಸಭಾ ಸದನದ ಕಡೆಗೆ ಹೊರಟಿತು. ಸಭಾ ಸದನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರು ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿದ್ದರು.

ಸಭಾ ಸದನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯು ಇಬ್ಭಾಗವಾಯಿತು. ವೇದಿಕೆಯ ಮೇಲೆ ಮಾನ್ಯ ಅಧ್ಯಕ್ಷರವರು ರಾಜ್ಯಪಾಲರ ಬಲಭಾಗದಲ್ಲಿ ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡಭಾಗದಲ್ಲಿ ಕುಳಿತುಕೊಂಡರು. ರಾಜ್ಯಪಾಲರು ವೇದಿಕೆಯ ಮಧ್ಯಭಾಗದಲ್ಲಿನ ಆಸನದಲ್ಲಿ ಕುಳಿತುಕೊಂಡರು. ಕಾರ್ಯದರ್ಶಿಯವರು ವೇದಿಕೆಯ ಮುಂದುಗಡೆ ಇರುವ ಆಸನದಲ್ಲಿ ಕುಳಿತುಕೊಂಡರು.

ರಾಜ್ಯಪಾಲರ ಭಾಷಣ

ಸನ್ಮಾನ್ಯ ರಾಜ್ಯಪಾಲರು (ಖುರ್ಷಿದ್ ಆಲಂ ಖಾನ್):– ಸನ್ಮಾನ್ಯ ಸಭಾಪತಿಗಳೆ, ಸನ್ಮಾನ್ಯ ಅಧ್ಯಕ್ಷರೆ ಮತ್ತು ಮಾನ್ಯ ಸದಸ್ಯರುಗಳೆ, ತಮಗೆಲ್ಲರಿಗೂ ಹಾರ್ದಿಕ ಸ್ವಾಗತ. It gives me great pleasure to welcome all of you to this Joint Session of the Karnataka Legislature in the wake of the recent General Elections held for the Karnataka Legislative Assembly.

ಶ್ರೀ ವಾಟಾಳ್ ನಾಗರಾಜ್:– ರಾಜ್ಯಪಾಲರ ಭಾಷಣವನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ.

(ಮಾನ್ಯ ಸದಸ್ಯರು ಹೇಳುತ್ತಿದ್ದ ಯಾವ ಪದಗಳೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ)

(ಶ್ರೀಮತಿ ಪ್ರಮೀಳ ನೇಸರ್ಗಿಯವರು ಸಹ ಎದ್ದು ನಿಂತು ಮಾತನಾಡುತ್ತಿದ್ದರು)

(ಗೊಂದಲ)

(ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ಒಟ್ಟಿಗೆ ಎದ್ದುನಿಂತು ಮಾತನಾಡುತ್ತಿದ್ದರು.)

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕಪ್ಪುಬಟ್ಟೆಯನ್ನು ಸಭೆಯಲ್ಲಿ ಪ್ರದರ್ಶನ ಮಾಡುತ್ತಾ ಸಭಾತ್ಯಾಗ ಮಾಡಿದರು)

(ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರೂ ಸಹ ಸಭಾತ್ಯಾಗ ಮಾಡಿದರು)

His Excellency The Governor of Karnataka:- In Particular, I would like to congratulate those Hon'ble Members of both the Assembly and the Council who have joined these august Houses for the first time. I would also like to take this opportunity to congratulate the people of Karnataka who have elected the present Government to power in a peaceful and democratic manner.

2. The people of Karnataka have elected my Government with a clear majority. They have reposed their trust in the present Government in an ample measure. My Government, on its part, will make all possible efforts to live upto the expectations of the people of Karnataka.

3. The responsibilities cast upon the Hon'ble Members of both the Houses can hardly be over emphasised. In the true tradition of democratic functioning in our State, the elected representatives must strive hard to fulfill the aspirations of the people. An honest, transparent and effective administration, responsive to the needs of the people, will, therefore, be high on the list of priorities of my Government. The availability of total resources, is always limited, compared to the pressing needs of the people. Therefore, while trying to meet these needs and usher in an all-round development of the State, prioritisation of programmes and activities becomes inevitable.

4. In particular, my Government will not succumb to the temptation of exagreerating the availability of resources and generating false hopes. My Government would, on the other hand, like to take both the Houses and the people and Karnataka into confidence and prepare more realistic and viable programmes.

5. Logically, the means available to Government for effective

implementation of Plan Development Schemes is to curtail wasteful expenditure and prevent leakage of revenue. My Government will avoid all non-productive expenditure, particularly on the Non-Plan side. No large non-plan expenditure will be incurred only to appease certain sections of the public who are otherwise in a position to pay for certain inputs and amenities. My Government will work towards more realistic cost based levies and rates for scarce inputs like Water, Electricity etc., in consultation with the consumers and the Hon'ble Members and reduce the huge revenue losses now being incurred in providing these inputs.

6. Considering the overall situation and the desired priorities, my Government will take up the task of promoting development, especially in crucial sectors like Power, Irrigation, Industrialisation, Woman Empowerment, Rural Development, Agriculture, Health and Education with determination and sincerity. Simultaneously, my Government will strive zealously to safeguard and further improve the social and economic lives of the deprived and backward sections of the people of Karnataka. Particular attention will be paid to improve the conditions of the Schedule Castes, Schedule Tribes, Backward Classes and Minorities. Special measures will be taken for ensuring their welfare. It will be the primary goal of my Government to mobilise additional resources through appropriate means to achieve higher levels of development and public welfare in these vital areas. To this end, my Government stands fully Committed.

7. In order to achieve these broad objectives, my Government will make sure that the utilisation of the share of the waters allocated to the State in the Krishna Basin in the North and the optimum utilisation of our rightful claim on the waters of Cauvery Basin in the South are actually realised at the earliest. For Krishna Basin, in particular, my Government is fully cognisant of the need to complete the irrigation works by the deadline of 2000 AD as laid down under the Bachawat Award and will raise the resources required for execution of these works by that time through Irrigation Bonds. While doing so, it will be the endeavour of my Government to involve the potential beneficiaries under the Project, namely, the farmers living in the Krishna Basin area.

8. In the Power Sector, the Policy of my Government will be to encourage investment by Private Sector firms, including foreign Companies. This will be done within a framework which will permit the Karnataka Electricity Board not only to meet the ever increasing demand for electrical energy in our State, but also to ensure that the cost of such energy remains reasonable. Simultaneously, Public interest will be the paramount consideration for my Government in Selecting the specific schemes

proposed by these power generation Companies. While framing conditionalities, subject to which Agreements will be entered into with the Private Sector firms, our aim will be to ensure that long-term economics of development of Power and the Transmission and Distribution system becomes optimal. For this purpose, my Government will shortly come out with policy announcements for ensuring commensurate investments in the Transmission and Distribution system. This latter area has not been adequately provided for so far.

9. My Government firmly believes that the Rural Development, including administration of schemes in critical areas like Rural Employment, Rural Water Supply and Sanitation, Rural Roads, Primary Health care and Primary and Secondary Education in rural areas, Village and Cottage Industries, improvement in Agricultural Extension Services and productivity in Agriculture can best be achieved through effective and popularly elected Panchayat Raj Institutions. In this important direction my Government would like to enable the Panchayat Raj Institution at all levels to function in an autonomous and accountable manner. My Government, therefore, would like to carry out certain necessary amendments to the present Panchayat Raj Act and restore the supremacy to elected representatives of the people in these local bodies.

10. As you are doubtless aware, agricultural credit is a very important input for enhancing productivity in agriculture and allied activities ensuring thereby a continuously increasing rural income. Thus, provision of Agricultural Credit at reasonable interest becomes a major goal for sustained long-term development of the State. However, it has been observed that our farmers often suffer the heavy burden of huge accumulated interest on agricultural loans. Because of their limited resources, the farmers have not been able to discharge the liability of both the accumulated interest and the principal amount. Recirculation of agricultural credit and increase in its volume have consequently suffered. In order to set right this situation, and strictly as a one time measure, interest, including the penal interest on the outstanding agricultural loans will be waived in the co-operative sector, provided the entire principal amount is repaid by 31.3.1995.

11. My Government which had earlier introduced the Green Cards for the poorer sections of the people, would seriously consider providing a substantial subsidy for making rice available at an affordable price. To this end the procurement and delivery system for the Public Distribution of foodgrains will also be suitably strengthened. The subsidised rice will be made available to all the Green Card Holders.

12. To ensure large investments in Sunrise Industries and those Industries which have a competitive and locational advantage for Karnataka, My Government have already initiated certain important steps. A Foreign Investment Promotion Board has been constituted under the Chairmanship of the Hon'ble Chief Minister. Here the major thrust of the policy of my Government will be to ensure expeditious consideration and clearance of all appropriate investment proposals. In particular, my Government will ensure that the infrastructure needs of both the large, small and village industries are adequately met.

13. Women who form nearly fifty percent of our population are yet to exercise political power in a commensurate manner. The most important forum for the exercise of this power in a State is the two Houses of Legislature. My Government is committed to bringing about reservation of 30% (Thirty percent) of the total number of seats in both the Houses for women. Based on the Resolution to be passed in both the Houses, my Government would persuade the Government of India to make the necessary amendments to the Representation of Peoples' Act in this behalf.

14. Before I conclude my speech, I would like to express my sincere hope that both the Houses will fruitfully and effectively transact their business. I wish you all success in you endeavour. I have no doubt that the business you will transact will be in the best interest of the people of Karnataka.

May I also convey my Season's Greetings and my Best wishes to all of you for a happy and prosperous New Year.

JAI HIND JAI KARNATAKA

(The joint session concluded at 11-10 A.M.)

(ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡ ಭಾಷಾಂತರ)

ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಮತ್ತು ಮಾನ್ಯ ಸದಸ್ಯರೇ,

ಇತ್ತೀಚೆಗೆ ಕರ್ನಾಟಕ ವಿಧಾನಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಆರಿಸಿ ಬಂದ ನಿಮ್ಮೆಲ್ಲರನ್ನೂ ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನಕ್ಕೆ ಸ್ವಾಗತಿಸಲು ನನಗೆ ತುಂಬಾ ಸಂತೋಷವಾಗಿದೆ. ಅದರಲ್ಲೂ ವಿಶೇಷವಾಗಿ, ಮೊದಲ ಬಾರಿಗೆ ಈ ಸದನಕ್ಕೆ ಆಯ್ಕೆಯಾಗಿರುವ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಮಾನ್ಯ ಸದಸ್ಯರನ್ನು ನಾನು ಅಭಿನಂದಿಸುತ್ತೇನೆ. ಅಲ್ಲದೆ, ಪ್ರಸಕ್ತ ಸರ್ಕಾರವನ್ನು ಶಾಂತಿಯುತ ಹಾಗೂ ಪ್ರಜಾಸತ್ತಾತ್ಮಕ ರೀತಿಯಲ್ಲಿ ಚುನಾಯಿಸಿ ಅಧಿಕಾರಕ್ಕೆ ತಂದ ಕರ್ನಾಟಕದ ಜನತೆಗೆ ನನ್ನ ಅಭಿನಂದನೆಗಳು.

2. ಕರ್ನಾಟಕದ ಜನತೆ ಅಗಾಧ ವಿಶ್ವಾಸವನ್ನು ವ್ಯಕ್ತಪಡಿಸಿ, ಸ್ಪಷ್ಟ ಬಹುಮತದಿಂದ ನನ್ನ ಸರ್ಕಾರವನ್ನು ಚುನಾಯಿಸಿದ್ದಾರೆ. ಅವರ ನಿರೀಕ್ಷೆಗನುಗುಣವಾಗಿ ನಡೆದುಕೊಳ್ಳಲು ನನ್ನ ಸರ್ಕಾರ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಲು ಕಂಕಣಬದ್ಧವಾಗಿದೆ.

3. ಉಭಯ ಸದನಗಳ ಸನ್ಮಾನ್ಯ ಸದಸ್ಯರ ಮೇಲಿರುವ ಗುರುತರವಾದ ಜವಾಬ್ದಾರಿಯನ್ನು ನಾನು ಮತ್ತೊಮ್ಮೆ ಒತ್ತಿ ಹೇಳಬೇಕಾಗಿಲ್ಲ. ನಾವೆಲ್ಲ ಹೆಮ್ಮೆಪಡಬಹುದಾದಂಥ ರೀತಿಯಲ್ಲಿ ಚುನಾಯಿತ ಪ್ರತಿನಿಧಿಗಳು ಜನತೆಯ ಆಶೋತ್ತರಗಳನ್ನು ಈಡೇರಿಸುವತ್ತ ಸರ್ವ ಪ್ರಯತ್ನಗಳನ್ನೂ ಮಾಡಬೇಕಾಗಿದೆ. ಜನಸಾಮಾನ್ಯರ ಅಗತ್ಯಗಳಿಗೆ ಸ್ಪಂದಿಸುವ ಪ್ರಾಮಾಣಿಕ, ಪಾರದರ್ಶಕ ಹಾಗೂ ದಕ್ಷ ಆಡಳಿತವನ್ನು ನೀಡುವುದು ನನ್ನ ಸರ್ಕಾರದ ಆದ್ಯ ಕರ್ತವ್ಯ. ಜನತೆಯ ಅವಶ್ಯಕತೆಗಳನ್ನು ಪೂರೈಸುವಲ್ಲಿ ಸರ್ಕಾರಕ್ಕೆ ಲಭ್ಯವಿರುವ ಸಂಪನ್ಮೂಲಗಳು ಪರಿಮಿತವಾದವು ಎಂಬುದು ನಿತ್ಯ ಸತ್ಯ. ಆದ್ದರಿಂದ, ಈಗ ಅಗತ್ಯಗಳನ್ನು ಪೂರೈಸುವ ಪ್ರಯತ್ನದಲ್ಲಿ ಹಾಗೂ ಕರ್ನಾಟಕ ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವ ದಿಸೆಯಲ್ಲಿ ಸರ್ಕಾರ ತನ್ನ ಕಾರ್ಯಕ್ರಮಗಳನ್ನು ಆದ್ಯತೆಗಳಿಗನುಗುಣವಾಗಿ ಹಮ್ಮಿಕೊಳ್ಳುವುದು ಅನಿವಾರ್ಯ.

4. ವಸ್ತುಸ್ಥಿತಿಯನ್ನು ಮೀರಿ ಸಂಪನ್ಮೂಲಗಳನ್ನು ಉತ್ಪ್ರೇಕ್ಷಿಸುವ ಹಾಗೂ ರಾಜ್ಯದ ಪ್ರಸಕ್ತ ಹಣಕಾಸಿನ ಪರಿಸ್ಥಿತಿಯನ್ನು ಆಧರಿಸದ ಪೊಳ್ಳು ಭರವಸೆಗಳನ್ನು ಕೊಡುವ ಪ್ರಲೋಭನೆಗೆ ನನ್ನ ಸರ್ಕಾರವು ಒಳಗಾಗುವುದಿಲ್ಲ. ಅದರ ಬದಲಾಗಿ ನನ್ನ ಸರ್ಕಾರ ಈ ಉಭಯ ಸದನಗಳನ್ನು ಹಾಗೂ ಕರ್ನಾಟಕದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ವಾಸ್ತವಿಕ ಕಾರ್ಯಸಾಧುವಾದ ಕಾರ್ಯಕ್ರಮಗಳನ್ನು ರೂಪಿಸುತ್ತದೆ.

5. ಯೋಜನಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ವ್ಯರ್ಥ ವೆಚ್ಚವನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ಆದಾಯ ಸಂಗ್ರಹಣದಲ್ಲಿ ಆಗಬಹುದಾದ ಸೋರಿಕೆಯನ್ನು ತಡೆಗಟ್ಟುವುದೇ ಲಭ್ಯವಿಸುವ ಮಾರ್ಗೋಪಾಯ. ನನ್ನ ಸರ್ಕಾರವು ಮುಖ್ಯವಾಗಿ ಸವಲತ್ತು ಹಾಗೂ ಸೌಕರ್ಯಗಳ ವೆಚ್ಚ ಭರಿಸುವ ಸಾಮರ್ಥ್ಯವಿರುವ ಜನರ ಮನವೊಲಿಸುವುದಕ್ಕಾಗಿ ಯಾವುದೇ ಅನುತ್ಪಾದಕ ವೆಚ್ಚವನ್ನು ಮಾಡುವುದಿಲ್ಲ. ನನ್ನ ಸರ್ಕಾರ ನೀರು, ವಿದ್ಯುಚ್ಛಕ್ತಿ ಮುಂತಾದ ಸೌಲಭ್ಯಗಳಿಗೆ ಬಳಕೆದಾರರು ತೆರಬೇಕಾದ ಶುಲ್ಕವನ್ನು ಮಾನ್ಯ ಸದಸ್ಯರೊಂದಿಗೆ ಸಮಾಲೋಚಿಸಿ ಹೆಚ್ಚು ವಾಸ್ತವಿಕವಾದ ದರಗಳನ್ನು ವಿಧಿಸುವುದಕ್ಕೆ ಯತ್ನಿಸುತ್ತದೆ. ಈ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಈಗ ಆಗುತ್ತಿರುವ ಅಗಾಧ ಪ್ರಮಾಣದ ನಷ್ಟವನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುವುದು.

6. ಒಟ್ಟಾರೆ ಪರಿಸ್ಥಿತಿಯನ್ನು ಮತ್ತು ಅಪೇಕ್ಷಿತ ಆದ್ಯತೆಗಳನ್ನು ಪರಿಗಣಿಸಿ, ನನ್ನ ಸರ್ಕಾರವು ಮುಖ್ಯವಾಗಿ ವಿದ್ಯುಚ್ಛಕ್ತಿ, ನೀರಾವರಿ, ಕೈಗಾರೀಕರಣ, ಮಹಿಳೆಯರಿಗೆ ಅಧಿಕಾರ, ಗ್ರಾಮೀಣ ಅಭಿವೃದ್ಧಿ, ಕೃಷಿ ಉತ್ಪಾದನೆಯೂ ಸೇರಿದಂತೆ ಕೃಷಿ, ಆರೋಗ್ಯ ಮತ್ತು ಶಿಕ್ಷಣ ಮುಂತಾದ ಮಹತ್ವದ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸುವ ಯತ್ನವನ್ನು ದೃಢ ನಿರ್ಧಾರ ಮತ್ತು ಪ್ರಾಮಾಣಿಕತೆಯೊಂದಿಗೆ ಕೈಗೊಳ್ಳುತ್ತದೆ. ಶೋಷಿತ ಮತ್ತು ಹಿಂದುಳಿದ ವರ್ಗಗಳ ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ಸುಧಾರಿಸಲು ನನ್ನ ಸರ್ಕಾರವು ಶ್ರದ್ಧೆಯಿಂದ ಶ್ರಮಿಸುತ್ತದೆ. ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗಳ, ಹಿಂದುಳಿದ ವರ್ಗದವರ ಮತ್ತು ಅಲ್ಪಸಂಖ್ಯಾತರ ಸ್ಥಿತಿಯನ್ನು ಉತ್ತಮಪಡಿಸಲು ವಿಶೇಷ ಗಮನವನ್ನು ನೀಡುತ್ತದೆ. ಅವರ ಕ್ಷೇಮಾಭಿವೃದ್ಧಿಗಾಗಿ ವಿಶೇಷ ಕ್ರಮಗಳನ್ನು ಜಾರಿಗೊಳಿಸಲಾಗುವುದು. ಈ ಪ್ರಮುಖ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಮತ್ತು ಸಾರ್ವಜನಿಕ ಕ್ಷೇಮಾಭಿವೃದ್ಧಿಯನ್ನು ಸಾಧಿಸಲು ಯುಕ್ತ ಮಾರ್ಗಗಳ ಮೂಲಕ ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸುವುದು ಸಹ ನನ್ನ ಸರ್ಕಾರದ ಆದ್ಯ ಗುರಿಯಾಗಿದೆ. ಇದನ್ನು ಸಾಧಿಸುವ ದಿಸೆಯಲ್ಲಿ ನನ್ನ ಸರ್ಕಾರವು ಸಂಪೂರ್ಣವಾಗಿ ಬದ್ಧವಾಗಿದೆ.

7. ಈ ಸ್ಥೂಲ ಉದ್ದೇಶಗಳನ್ನು ಸಾಧಿಸುವ ದೃಷ್ಟಿಯಿಂದ, ರಾಜ್ಯದ ಉತ್ತರಕ್ಕಿರುವ ಕೃಷ್ಣಾ

ಜಲಾನಯನ ಪ್ರದೇಶದಲ್ಲಿ ರಾಜ್ಯದ ನೀರಿನ ಪಾಲಿನ ಸೂಕ್ತ ಬಳಕೆಯನ್ನು ಮತ್ತು ದಕ್ಷಿಣಕ್ಕಿರುವ ಕಾವೇರಿ ಜಲಾನಯನ ಪ್ರದೇಶದ ನೀರಿನ ನಮ್ಮ ನ್ಯಾಯಯುತ ಪಾಲನ್ನು ಗರಿಷ್ಠ ಪ್ರಮಾಣದಲ್ಲಿ ಆದಷ್ಟು ಬೇಗನೆ ಬಳಸಿಕೊಳ್ಳಲು ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳಲಾಗುವುದು. ಕೃಷ್ಣಾ ಜಲಾನಯನ ಯೋಜನೆಗೆ ನಿರ್ದಿಷ್ಟವಾಗಿ ಸಂಬಂಧಿಸಿದಂತೆ ನನ್ನ ಸರ್ಕಾರವು ಬಚಾವತ್ ತೀರ್ಪಿನಲ್ಲಿ ನಿರೂಪಿಸಲಾಗಿರುವಂತೆ ಕ್ರಿ.ಶ. 2000ದ ಹೊತ್ತಿಗೆ ನೀರಾವರಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿದೆ ಎಂಬ ಬಗ್ಗೆ ನನ್ನ ಸರ್ಕಾರಕ್ಕೆ ಸಂಪೂರ್ಣ ಅರಿವಿದೆ. ನೀರಾವರಿ ಬಾಂಡುಗಳ ಮೂಲಕ ಆ ವೇಳೆಗೆ ಈ ಕಾಮಗಾರಿಗಳನ್ನು ಜಾರಿಗೊಳಿಸುವುದಕ್ಕಾಗಿ ಅಗತ್ಯವಿರುವ ಸಂಪನ್ಮೂಲಗಳನ್ನು ಸಂಗ್ರಹಿಸಲಾಗುವುದು. ಹೀಗೆ ಮಾಡುವಾಗ, ಈ ಯೋಜನೆಯ ಅನುಕೂಲ ಪಡೆಯಲಿರುವ ಫಲಾನುಭವಿಗಳು ಎಂದರೆ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ವಾಸಿಸುವ ರೈತರು ಇದರಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ನನ್ನ ಸರ್ಕಾರವು ಪ್ರಯತ್ನಿಸುವುದು.

8. ವಿದ್ಯುತ್ ವಲಯದಲ್ಲಿ, ವಿದೇಶಿ ಕಂಪನಿಗಳೂ ಸೇರಿದಂತೆ ಖಾಸಗಿ ವಲಯದ ಸಂಸ್ಥೆಗಳು ಬಂಡವಾಳ ಹೂಡುವಂತೆ ಪ್ರೋತ್ಸಾಹಿಸುವುದು ನನ್ನ ಸರ್ಕಾರದ ನೀತಿ. ಹೀಗೆ ಮಾಡುವಾಗ, ನಮ್ಮ ರಾಜ್ಯದಲ್ಲಿ ಸತತವಾಗಿ ಹೆಚ್ಚುತ್ತಿರುವ ವಿದ್ಯುಚ್ಛಕ್ತಿ ಬೇಡಿಕೆಯನ್ನು ಪೂರೈಸಲು ಹಾಗೂ ಅಂಥ ವಿದ್ಯುಚ್ಛಕ್ತಿಯ ಬೆಲೆಯು ನ್ಯಾಯವಾಗಿ ಇರುವಂತೆ ನೋಡಿಕೊಳ್ಳಲು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವುದು. ಹಾಗೆಯೇ ಈ ವಿದ್ಯುತ್ ಉತ್ಪಾದಕ ಸಂಸ್ಥೆಗಳ ಪ್ರಸ್ತಾವಿತ ನಿರ್ದಿಷ್ಟ ಯೋಜನೆಗಳನ್ನು ಆಯ್ಕೆ ಮಾಡುವಲ್ಲಿ ನನ್ನ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಗೆ ಆದ್ಯ ಗಮನವನ್ನು ನೀಡುತ್ತದೆ. ಖಾಸಗಿ ವಲಯದ ಸಂಸ್ಥೆಗಳು ವಿದ್ಯುತ್ ಅಭಿವೃದ್ಧಿ ಮತ್ತು ವಹನ ಮತ್ತು ವಿತರಣಾ ವ್ಯವಸ್ಥೆಯಲ್ಲಿ ಗರಿಷ್ಠ ಪ್ರಮಾಣದ ಮಿತವ್ಯಯವನ್ನು ಸಾಧಿಸುವುದು ನಮ್ಮ ಉದ್ದೇಶವಾಗಿದೆ. ಈ ಉದ್ದೇಶಕ್ಕಾಗಿ ನನ್ನ ಸರ್ಕಾರವು ವಿದ್ಯುತ್ ವಹನ ಮತ್ತು ವಿತರಣಾ ವ್ಯವ್ಯಸ್ಥೆಯಲ್ಲಿ ಸಮಪ್ರಮಾಣದ ಹಣ ಹೂಡಿಕೆಗಳನ್ನು ಖಚಿತಪಡಿಸಲು ಶೀಘ್ರದಲ್ಲಿಯೇ ಕಾರ್ಯನೀತಿಯೊಂದನ್ನು ರೂಪಿಸಲಿದೆ. ಈ ವಿದ್ಯುತ್ ವಹನ ಮತ್ತು ವಿತರಣಾ ವ್ಯವಸ್ಥೆಗಳಿಗಾಗಿ ಇದುವರೆಗೆ ಯಥೋಚಿತ ಏರ್ಪಾಡನ್ನು ಮಾಡಲಾಗಿಲ್ಲ.

9. ಗ್ರಾಮೀಣ ಉದ್ಯೋಗ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ, ಗ್ರಾಮೀಣ ರಸ್ತೆಗಳು, ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ರಕ್ಷಣೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ಗ್ರಾಮ ಮತ್ತು ಗುಡಿ ಕೈಗಾರಿಕೆಗಳು, ಕೃಷಿ ವಿಸ್ತರಣಾ ಸೇವೆ ಮತ್ತು ಕೃಷಿಯಲ್ಲಿ ಉತ್ಪಾದಕತೆ – ಇವುಗಳ ಸುಧಾರಣೆ ಮುಂತಾದ ಕ್ಷೇತ್ರಗಳಲ್ಲಿನ ಯೋಜನೆಗಳ ನಿರ್ವಹಣೆಯನ್ನೊಳಗೊಂಡಂತೆ ಗ್ರಾಮೀಣಾಭಿವೃದ್ಧಿಯನ್ನು ಜನರಿಂದ ಚುನಾಯಿತವಾದ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಯಶಸ್ವಿಯಾಗಿ ಸಾಧಿಸಬಹುದೆಂಬುದನ್ನು ನನ್ನ ಸರ್ಕಾರ ದೃಢವಾಗಿ ನಂಬಿದೆ. ಈ ಪ್ರಮುಖ ದಿಸೆಯಲ್ಲಿ ನನ್ನ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳನ್ನು ಎಲ್ಲಾ ಹಂತಗಳಲ್ಲಿ ಸ್ವಾಯತ್ತ ಮತ್ತು ಜವಾಬ್ದಾರಿಯುತ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲು ಇಚ್ಛಿಸಿದೆ. ಅದುದರಿಂದ ಈಗಿರುವ ಪಂಚಾಯತ್ ರಾಜ್ ಅಧಿನಿಯಮಕ್ಕೆ ಕೆಲವು ಅವಶ್ಯಕ ತಿದ್ದುಪಡಿಗಳನ್ನು ಮಾಡಲು ಮತ್ತು ಈ ಸ್ಥಳೀಯ ಸಂಸ್ಥೆಗಳಿಗೆ ಜನ ಚುನಾಯಿತ ಪ್ರತಿನಿಧಿಗಳ ಸಾರ್ವಭೌಮತ್ವವನ್ನು ಮರಳಿ ತರಲು ನನ್ನ ಸರ್ಕಾರವು ಉದ್ದೇಶಿಸಿದೆ.

10. ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಕಾರ್ಯಚಟುವಟಿಕೆಗಳಲ್ಲಿನ ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಆ ಮೂಲಕ ಗ್ರಾಮೀಣ ವರಮಾನದಲ್ಲಿ ನಿರಂತರವಾದ ಏರಿಕೆಯಾಗುವಂತೆ ನೋಡಿಕೊಳ್ಳಲು ಕೃಷಿ ಸಾಲವು ನಿಸ್ಸಂದೇಹವಾಗಿಯೂ ಒಂದು ಮುಖ್ಯ ಸಾಧನ ಎಂಬುದು ನಿಮಗೆ

ತಿಳಿದೇ ಇದೆ. ಆದ್ದರಿಂದ, ಯುಕ್ತ ಬಡ್ಡಿ ದರದಲ್ಲಿ ಕೃಷಿ ಸಾಲವನ್ನು ನೀಡುವುದು ರಾಜ್ಯ ದೀರ್ಘಾವಧಿ ಅಭಿವೃದ್ಧಿಗೆ ಒಂದು ಪ್ರಮುಖ ಕ್ರಮವಾಗಲಿದೆ. ನಮ್ಮ ರೈತರು ಕೃಷಿ ಸಾಲವನ್ನು ಪಡೆದು ಸಂಚಿತವಾದ ಬಡ್ಡಿಯ ಭಾರದಿಂದ ತೊಂದರೆಗೊಳಗಾಗಿರುವುದು ಸರ್ವವೇದ್ಯ. ಅವರ ಪರಿಮಿತ ಸಂಪನ್ಮೂಲಗಳಿಂದಾಗಿ, ಸಂಚಿತ ಬಡ್ಡಿ ಮತ್ತು ಅಸಲು ಹಣ – ಈ ಎರಡನ್ನೂ ಮರುಸಂದಾಯ ಮಾಡಲು ರೈತರಿಗೆ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಕೃಷಿ ಸಾಲವನ್ನು ಮತ್ತೆ ನೀಡುವುದಕ್ಕೆ ಮತ್ತು ಅದರ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ತೊಂದರೆಯಾಗಿದೆ. ಈ ಪರಿಸ್ಥಿತಿಯನ್ನು ಸರಿಪಡಿಸಲು ಮತ್ತು ಏಕಕಾಲಿಕ ಕ್ರಮವಾಗಿ ಸಹಕಾರ ವಲಯದಲ್ಲಿನ ಕೃಷಿ ಸಾಲಗಳ ಮೇಲಿನ ಸುಸ್ತಿ ಬಡ್ಡಿಯೂ ಸೇರಿದಂತೆ ಬಡ್ಡಿಯನ್ನು ಮನ್ನಾ ಮಾಡಲಾಗುವುದು. ಆದರೆ ಈ ಸೌಲಭ್ಯ ಪಡೆಯಬೇಕಾದರೆ ಅಸಲು ಹಣವನ್ನು 31–3–1995ರೊಳಗಾಗಿ ಪೂರ್ತಿಯಾಗಿ ಮರುಸಂದಾಯ ಮಾಡಬೇಕಾಗುತ್ತದೆ.

11. ಈ ಮೊದಲು ಕಡುಬಡವರಾದ ಜನರಿಗೆ ಹಸಿರು ಚೀಟಿ ನೀಡಿಕೆಯನ್ನು ಜಾರಿಗೊಳಿಸಿದ್ದ ನನ್ನ ಸರ್ಕಾರವು, ಅವರಿಗೆ ಕೈಗೆಟಕುವ ಬೆಲೆಯಲ್ಲಿ ಅಕ್ಕಿ ದೊರೆಯುವಂತೆ ಮಾಡಲು ಸಹಾಯ ಧನ ಒದಗಿಸುವ ಬಗ್ಗೆ ಗಂಭೀರವಾಗಿ ಪರಿಶೀಲಿಸುತ್ತದೆ. ಇದನ್ನು ಸಾಧಿಸಲು ಆಹಾರಧಾನ್ಯಗಳ ಸಾರ್ವಜನಿಕ ವಿತರಣೆಗಾಗಿ ಅವುಗಳ ಸಂಗ್ರಹಣೆ ಮತ್ತು ಹಂಚಿಕೆಯ ವ್ಯವಸ್ಥೆಯನ್ನೂ ಸಹ ಸೂಕ್ತವಾಗಿ ಬಲಪಡಿಸಲಾಗುವುದು. ಹಸಿರು ಚೀಟಿ ಹೊಂದಿರುವವರಿಗೆ ಅಕ್ಕಿಯನ್ನು ರಿಯಾಯಿತಿ ದರದಲ್ಲಿ ದೊರೆಯುವಂತೆ ವ್ಯವಸ್ಥೆ ಮಾಡಲಾಗುವುದು.

12. ಅಭಿವೃದ್ಧಿ ಹೊಂದುವ ಕೈಗಾರಿಕೆಗಳಲ್ಲಿ ಮತ್ತು ಕರ್ನಾಟಕದಲ್ಲಿ ಸ್ಪರ್ಧಾತ್ಮಕ ಹಾಗೂ ಸ್ಥಳೀಯ ಸೌಲಭ್ಯವಿರುವಂಥ ಕೈಗಾರಿಕೆಗಳಲ್ಲಿ ಅತ್ಯಧಿಕ ಪ್ರಮಾಣದ ಬಂಡವಾಳವನ್ನು ಹೂಡುವಂತೆ ನೋಡಿಕೊಳ್ಳಲು ನನ್ನ ಸರ್ಕಾರ ಈಗಾಗಲೇ ಕೆಲವು ಮುಖ್ಯ ಕ್ರಮಗಳನ್ನು ಪ್ರಾರಂಭಿಸಿದೆ. ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ವಿದೇಶಿ ಬಂಡವಾಳ ಹೂಡಿಕೆ ಅಭಿವೃದ್ಧಿ ಮಂಡಲಿಯನ್ನು ರಚಿಸಲಾಗಿದೆ. ಇಲ್ಲಿ, ಸೂಕ್ತ ಬಂಡವಾಳ ಹೂಡಿಕೆಯ ಎಲ್ಲಾ ಪ್ರಸ್ತಾವನೆಗಳ ಅತ್ಯಂತ ಶೀಘ್ರ ಪರಿಶೀಲನೆ ಹಾಗೂ ಅವುಗಳಿಗೆ ಅನುಮತಿ ನೀಡಿಕೆ – ಇವುಗಳನ್ನು ಖಚಿತ ಪಡಿಸಿಕೊಳ್ಳುವುದು ನನ್ನ ಸರ್ಕಾರದ ನೀತಿಯ ಪ್ರಮುಖ ನಿಲುವಾಗಿದೆ. ವಿಶೇಷವಾಗಿ, ಬೃಹತ್ ಪ್ರಮಾಣದ ಕೈಗಾರಿಕೆಗಳೇ ಅಲ್ಲದೆ ಸಣ್ಣ ಹಾಗೂ ಗ್ರಾಮ ಕೈಗಾರಿಕೆಗಳಿಗೆ ಅವಶ್ಯಕವಾದ ಮೂಲಭೂತ ಸವಲತ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪೂರೈಸುವಂತೆ ನನ್ನ ಸರ್ಕಾರ ನೋಡಿಕೊಳ್ಳುತ್ತದೆ.

13. ನಮ್ಮ ಜನಸಂಖ್ಯೆಯ ಸುಮಾರು ಅರ್ಧದಷ್ಟಿರುವ ಮಹಿಳೆಯರು ಆ ಸಂಖ್ಯೆಗೆ ಅನುಗುಣವಾದ ಪ್ರಮಾಣದಲ್ಲಿ ರಾಜಕೀಯ ಅಧಿಕಾರವನ್ನು ಹೊಂದಿಲ್ಲ. ಈ ಅಧಿಕಾರವನ್ನು ಚಲಾಯಿಸುವ ನಿರ್ಣಾಯಕ ವೇದಿಕೆಗಳೆಂದರೆ ವಿಧಾನಮಂಡಲದ ಉಭಯ ಸದನಗಳು. ಎರಡೂ ಸದನಗಳಲ್ಲಿನ ಎಲ್ಲ ಸ್ಥಾನಗಳ ಶೇಕಡ 30 ರಷ್ಟನ್ನು ಮಹಿಳೆಯರಿಗಾಗಿ ಮೀಸಲಿಡಲು ನನ್ನ ಸರ್ಕಾರ ಬದ್ಧವಾಗಿದೆ. ಉಭಯ ಸದನಗಳಲ್ಲಿ ಅಂಗೀಕರಿಸಲಾಗುವ ನಿರ್ಣಯವನ್ನು ಆಧರಿಸಿ, ಇದಕ್ಕೆ ಸಂಬಂಧಿಸಿದಂತೆ ಜನತಾ ಪ್ರಾತಿನಿಧ್ಯ ಅಧಿನಿಯಮಕ್ಕೆ ಅವಶ್ಯಕ ತಿದ್ದುಪಡಿಗಳನ್ನು ತರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ನನ್ನ ಸರ್ಕಾರ ಆಶಿಸುತ್ತದೆ.

14. ನನ್ನ ಭಾಷಣವನ್ನು ಮುಕ್ತಾಯ ಮಾಡುವುದಕ್ಕೆ ಮುನ್ನ, ಉಭಯ ಸದನಗಳ ಸದಸ್ಯರು ತಮ್ಮ ಕಾರ್ಯಕಲಾಪಗಳನ್ನು ಫಲಪ್ರದವಾಗಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸುತ್ತಾರೆಂದು ನಾನು ಆಶಿಸುತ್ತೇನೆ. ಈ ದಿಸೆಯಲ್ಲಿ ನೀವು ಯಶಸ್ವಿಯಾಗಲೆಂದು ನನ್ನ ಹಾರೈಕೆ. ಕರ್ನಾಟಕ ಜನತೆಯ ಶುಭಚಿಂತನೆಯ ದೃಷ್ಟಿಯಿಂದ ನೀವು ತಮ್ಮ ಕಾರ್ಯಕಲಾಪಗಳೆಲ್ಲವನ್ನೂ ನಿರ್ವಹಿಸುವರೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ.

ಈ ಸಂದರ್ಭದಲ್ಲಿ ನಾನು ನಿಮ್ಮೆಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇನೆ.

ಜೈ ಹಿಂದ್ ಜೈ ಕರ್ನಾಟಕ

(ಸದನವು ಮತ್ತೆ 11.40 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಎಸ್. ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು.)

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು:– ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಮಂಡಿಸಲಾಯಿತು.

ಕಾರ್ಯದರ್ಶಿ:– ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಮಾನ್ಯ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಮುಂದೆ ಮಂಡಿಸುತ್ತೇನೆ.

Statement showing the Bills assented by the Governor/ President.

Sl. No.	Name of the Bill	Date of Assent	Assented by
1.	The Karnataka Entertainment Tax (Amendment) Bill 1994	27–09–94	Governor
2.	The Karnataka Appropriation (No.3) Bill 1994	27–09–94	Governor
3.	The Karnataka Appropriation (No. 4) Bill 1994	27–09–94	Governor
4.	The Karnataka Regularisations of Unauthorised Constructions in Urban areas (Amendment) Bill 1994.	30–09–94	Governor
5.	The Karnataka Silk Worm Seed Cocoon and Silk Yarn (Regulation of Production Supply, Distribution and sale) (Amendment) Bill 1994	30–09–94	Governor
6.	The Karnataka State Minorities Commission Bill 1994	30–09–94	Governor
7.	The Malnad Area Development Board (Amendment) Bill 1994	30–09–94	Governor